ದಿನಾಂಕಃ 23-04-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ಪಿರ್ಯಾದಿಯನ್ನು ಘಟನೆಯ ದಿನ ಸ್ಥಳದಲ್ಲಿ ನೀಡಿಲ್ಲ, ಠಾಣೆಯಲ್ಲಿ ನೀಡಿದ್ದೇನೆ. ಪಿರ್ಯಾದಿಯನ್ನು ನೀಡಲು ಠಾಣೆಗೆ ಎಷ್ಟು ಗಂಟೆಗೆ ಹೋಗಿದ್ದೆ ನೆನಪಿಲ್ಲ. ಸ್ಥಳದಲ್ಲಿ ಪಿ.ಎಸ್.ಐ, ಸಿ.ಪಿ.ಐ ಬಂದಾಗ ಪಿರ್ಯಾದಿ ನೀಡಲು ತೊಂದರೆ ಇರಲಿಲ್ಲ ಎಂದರೆ ಅವರು ನನಗೆ ಪಿರ್ಯಾದಿ ಕೊಡುವಂತೆ ಕೇಳಲಿಲ್ಲ. ಪಿರ್ಯಾದಿಯನ್ನು ನಾನು ಹೇಳಿದಂತೆ ಶಂಕರ ಎನ್ನುವವರು ಠಾಣೆಯಲ್ಲಿ ಬರೆದಿದ್ದಾರೆ.

ಆ ದಿನ ನಾನು ಠಾಣೆಗೆ ಹೋಗಿ ಪೊಲೀಸರ ಮುಂದೆ ಆರೋಪಿತರು ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ನನ್ನ ಚಿಕ್ಕಪ್ಪ ಮಲೆಪ್ಪನಿಗೆ ಹಾಗೂ ನನ್ನ ಅಣ್ಣ ವಿಠ್ಠಲನಿಗೆ ತಲೆಗೆ ಮತ್ತು ಕುತ್ತಿಗೆಗೆ ಗಾಯಗಳಾಗಿದ್ದವು, ಅವರು ಮರಣ ಹೊಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಮ್ಮನ ಮಗಳು ರೇಣುಕಾ ಇವಳು ಮಲ್ಲಪ್ಪ ಹುದ್ದಾರ, ಶಂಕರ ಗುಡದಿನ್ನಿ, ರಾಜು ಕಡದ, ಅರುಣ ನಾಗರೆಡ್ಡಿ, ಕಿರಣ ನಾಗರೆಡ್ಡಿ, ಕಾಡು ನಾಗರೆಡ್ಡಿ, ಲಕ್ಷ್ಮಣ ಜಟ್ಟೆನ್ನವರ ಹಾಗೂ ಇನ್ನೂ 13 ಜನರು ಇದ್ದರು ಹಾಗೂ ಸ್ಥಳದಲ್ಲಿ ಸ್ಯಾಮಸಂಗ್ ಮೊಬೈಲ ಹಾಗೂ ಕಾರಿನ ನಂಬರ ಪ್ಲೇಟ್ ಬಿದ್ದಿತ್ತು, ಸೈಕಲ ಮೋಟರ ಚಾವಿ ಹಾಗೂ

ಕಾರಿನ ಚಾವಿ ಮತ್ತು 2-3 ಜೊತೆ ಚಪ್ಪಲಿ ಬಿದ್ದಿದ್ದವು ಎಂದು ಹೇಳಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮುಮಾ-2 ರಿಂದ 4 ಅಮಾನತುಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಮೇ ತಿಂಗಳಲ್ಲಿ ನನ್ನ ಹಾಗೂ ನನ್ನ ಸಹೋದರರ 2 ಮನೆಗಳ ಮೇಲೆ ದಾಳಿ ಮಾಡಿ ಮನೆಗಳಿಗೆ ಹಾಗೂ ಟ್ರ್ಯಾಕ್ಟರಗಳಿಗೆ ಧ್ವಂಸ ಮಾಡಿ ನನ್ನ ತಲೆಗೆ ತಲ್ವಾರನಿಂದ ಹೊಡೆದ ವಿಷಯದಲ್ಲಿ ಪ್ರಕರಣ ದಾಖಲಿಸಿದ್ದು ಆ ಕೇಸನಲ್ಲಿ ಆರೋಪಿತರು ಜಾಮೀನಿನ ಮೇಲೆ ಬಂದು ಈ ಕೊಲೆಗೆ ಸಂಚು ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ಪೂರ್ವನಿಯೋಜಿತವಾಗಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

23-04-2025.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.